# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/85/2015-16 ದಿನಾಂಕ:08.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಶಿವರಾಮಪ್ಪ ಹೆಚ್ ತಂದೆ ಲೇಟ್ ಚೌಡಪ್ಪ<br>ಗ್ರಾಮ:-ಉಲವತ್ತಿ ತಾ:-ಹೆಚ್.ಬಿ.ಹಳ್ಳಿ | 1.ಡಿ.ರೈಮಾನ್ ತಂದೆ ಹುಸೇನ್ ಸಾಬ್<br>2.ಶಾಂತಪ್ಪ ತಂದೆ ಬಸಪ್ಪ<br>ಗ್ರಾಮ:-ಉಲವತ್ತಿ ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಕೊಟ್ರೇಶ ಎಸ್ ಶೆಟ್ಟರ್, ವಕೀಲರು,<br>ಹ.ಬೊ.ಹಳ್ಳಿ] |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಉಲವತ್ತಿ | 173/1 | 1-17 | ಖುಷ್ಕಿ |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಉಲವತ್ತಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಉಲವತ್ತಿ ಗ್ರಾಮದ ನಿವಾಸಿಯಾದ ಶಿವರಾಮಪ್ಪ ಹೆಚ್ ತಂದೆ ಲೇಟ್ ಚೌಡಪ್ಪ ಇವರು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಉಲವತ್ತಿ ಗ್ರಾಮದ ಶ್ರೀಮತಿ ಮರಡಿ ರಾದಮ್ಮ ಗಂಡ ಮರಡಿ ಬ್ರಹ್ಮಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03102-2015-2016 ದಿನಾಂಕ:04.12.2015 ರಂದು ಮೊತ್ತ ರೂ:91,000/-ಕ್ಕೆ ಖರೀದಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:06.12.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:14.12.2015ರಂದು 1.ಡಿ.ರೈಮಾನ್ ತಂದೆ ಹುಸೇನ್ ಸಾಬ್ 2.ಶಾಂತಪ್ಪ ತಂದೆ ಬಸಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.30/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:04.03.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:04.03.2016ರಿಂದ 11.08.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಗೈರುಹಾಜರಾಗಿರುತ್ತಾರೆ.

ಪ್ರಕರಣವನ್ನು ದಿನಾಂಕ:17.03.2016 ರಂದು ತಕರಾರುದಾರ(1)ರ ಪರ ಕೊಟ್ರೇಶ ಎಸ್ ಶೆಟ್ಟರ್, ವಕೀಲರು, ಹ.ಬೊ.ಹಳ್ಳಿ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಎ.ಶಿವಾನಂದ, ವಕೀಲರು ಹ.ಬೊ.ಹಳ್ಳಿ ಇವರ ದ್ವಾರ ಸಲ್ಲಿಸಿರುತ್ತಾರೆ.

14/10/16

ಪ್ರಕರಣದಲ್ಲಿ ದಿನಾಂಕ:29.03.2016 ರಂದು ತಕರಾರುದಾರರು ಹಾಜರಾಗಿರುತ್ತಾರೆ. ಪ್ರತಿವಾದಿ/ಎದರುದಾರರ ಪರ ಪ್ರತಿವಾದ ಪತ್ರವನ್ನು ಲಿಖಿತವಾಗಿ ಹೇಳಿಕೆಯನ್ನು ಈ ಕೆಳಗಿನಂತೆ ನೀಡಿರುತ್ತಾರೆ.

1) ಅರ್ಜಿದಾರರು ಅರ್ಜಿಯಲ್ಲಿ ಕಾಣಿಸಿದ ಅಂಶಗಳು ಸುಳ್ಳು ನಿರಾಧಾರದಿಂದ ಮತ್ತು ಕಾನೂನು ವಿರುದ್ಧವಾದ ಅಂಶಗಳಿಂದ ಕೂಡಿರುತ್ತದೆ.

2) ಅರ್ಜಿಯಲ್ಲಿ ಕಾಣಿಸಿದ ಆಸ್ತಿಯು ಉಲವತ್ತಿ ಗ್ರಾಮದ ಸ.ನಂ.173ಬಿ ಒಟ್ಟು ವಿಸ್ತೀರ್ಣ 4.77 ಎಕರೆ ಜಮೀನಿನಲ್ಲಿ 2-89 ಎಕರೆ ಜಮೀನಿನ ಬಗ್ಗೆ ಮಾನ್ಯ ಹ.ಬೊ.ಹಳ್ಳಿ ನ್ಯಾಯಾಲಯದಲ್ಲಿ ಮು.ದಾ.ಸಂಖ್ಯೆ 246/2015 ಎಂದು ದಾಖಲಿದ್ದು ಅದನ್ನು ನಮ್ಮ ತಾಯಿಯಾದ ದಾವಲೆ ಮೊಬೀ ಯವರು ಶ್ರೀಮತಿ ಮರಡಿ ರಾಧಮ್ಮ ಗಂಡ ಬ್ರಹ್ಮಪ್ಪ ಮತ್ತು ಮರಡಿ ಕರಿಯಮ್ಮ ಗಂಡ ಶಿವಪುತ್ರಪ್ಪ ಎಂಬುವರ ವಿರುದ್ದ ಸಲ್ಲಿಸಿರುವರು ಸದರಿ ಮರಡಿ ರಾಧಮ್ಮನವರು ಸಹಾ ಮೇಲ್ಕಂಡ ಅರ್ಜಿಯಲ್ಲಿಯ ಅರ್ಜಿದಾರರಿಗೆ ದಾವ ಆಸ್ತಿಯ ಸ.ನಂ.ಗೆ ಸಂಬಂಧ ಪಟ್ಟ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ಸದರಿ ಆಸ್ತಿಯ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ವಿವಾದವು ಈಗ ವಿಚಾರಣೆ ಹಂತದಲ್ಲಿರುತ್ತದೆ. ಸದರಿ ಅಂಶಗಳ ಬಗ್ಗೆ ಅರ್ಜಿದಾರರಿಗೆ ಸಹಾ ತಿಳಿದಿರುವ ವಿಷಯವಾಗಿರುತ್ತದೆ. ಸದರಿ ಅಂಶಗಳನ್ನು ಮುಚ್ಚಿಟ್ಟು ನ್ಯಾಯಾಲಯದಿಂದ ಆದೇಶ ಪಡೆಯಲು ಅರ್ಜಿದಾರರು ಯತ್ನಿಸಿರುವರು. ಸದರಿ ದಾವ ಪತ್ರದ ಪ್ರತಿಯ ನಕಲನ್ನು ಸಹಾ ಹಾಜರು ಪಡಿಸಿರುವೆನು ಅದನ್ನು ಮಾನ್ಯ ನ್ಯಾಯಾಲಯವು ಪರಿಶೀಲಿಸಬೇಕಾಗಿ ಪ್ರಾರ್ಥನೆ.

3) ದಾವ ಆಸ್ತಿಯು ಮೂಲತ: ಹೊನ್ನೂರ್ ಬೀ ಗಂಡ ಇಮಾಮ್ ಸಾಬ್ ಎಂಬುವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ದಿನಾಂಕ:07.11.1969 ರಂದು ನೋಂದಾಯಿತ ಕ್ರಯ ಪತ್ರದ ಮುಖಾಂತರ ಇಬ್ರಾಹಿಂ ಸಾಬ್ ಮತ್ತು ಅದಮ್ ಸಾಬ್ ಎಂಬುವರಿಂದ ಹೊನ್ನೂರ್ ಬೀ ಯವರು ಖರೀದಿಸಿರುತ್ತಾರೆ. ಸದರಿ ಖರೀಧಿ ಲಗಾಯ್ತು ಹೊನ್ನೂರು ಭೀಯವರ ಸ್ವಾಧೀನಾನುಭವದಲ್ಲಿತ್ತು ಸದರಿ ಹೊನ್ನೂರು ಬೀ ಯವರು ಈಗ ಗತಿಸಿರುತ್ತಾರೆ. ಸದರಿ ದಾವ ಆಸ್ತಿಯ ಸಂಪೂರ್ಣ ಒಡೆಯಳು ಹೊನ್ನೂರು ಬೀ ಯವರ ಆಗಿರುತ್ತಾರೆ. ಅವರ ಹಕ್ಕು ಅಧಿಕಾರ, ಅನುಭವದಲ್ಲಿತ್ತು. ಸದರಿ ಖರೀದಿ ಪತ್ರದ ದೃಢೀಕೃತ ಪ್ರತಿಯನ್ನು ಮಾನ್ಯ ನ್ಯಾಯಾಲಯ ಪರಿಶೀಲಿಸಬೇಕಾಗಿ ಪ್ರಾರ್ಥನೆ.

4) ಸದರಿ ಹೊನ್ನೂರು ಬೀ ಯವರು ತಮ್ಮ ಜೀವಿತಾವದಿಯಲ್ಲಿ ತಮ್ಮ ತಾಯಿಯಾದ ದಾವಲೇ ಮಾಬೀ ಯವರಿಗೆ ನೋಂದಾಯಿತ ವಿಲ್ ದಾವೆಯ ಮುಖಾಂತರ ದಾವ ಆಸ್ತಿಯನ್ನು ಬರೆದುಕೊಟ್ಟವರು ದಿನಾಂಕ:07.08.1989 ರಂದು ನೋಂದಾಯಿತ ವಿಲ್ ನಾಮೆಯಲ್ಲಿ ಸ.ನಂ.173ಬಿ ಪೈಕಿ 2-89 ಎಕರೆ ಜಮೀನನ್ನು ಸಂಪೂರ್ಣವಾಗಿ ಬರೆದುಕೊಟ್ಟಿರುತ್ತಾರೆ. ಆದರೆ ಸಂಖ್ಯೆಯು 2-39 ಎಂದು ತಪ್ಪಾಗಿ ನಮೂದಾಗಿರುತ್ತದೆ. ಸದರಿ ಹೊನ್ನೂರು ಬೀ ಯವರಿಗೆ ಯಾವುದೇ ಸಂತಾನ ಇರುವುದಿಲ್ಲ. ದಿನಾಂಕ:09.11.1989 ರಂದು ಸದರಿ ಹೊನ್ನೂರು ಬೀ ಯವರು ಆಕೆಯ ವಾರಸುದಾರರಾದ ನಮ್ಮ ತಾಯಿಯಾದ ದಾವಲೆ ಮಾಬೀ ಯವರನ್ನು ಬಿಟ್ಟು ಗತಿಸಿದ್ದು ಸದರಿ ಹೊನ್ನೂರು ಬೀ ಗತಿಸಿದ ನಂತರ ನೋಂದಾಯಿತ ವಿಲ್ ಕಾರ್ಯರೂಪಕ್ಕೆ ಬಂದಿತ್ತು. ಸದರಿ ನೋಂದಾಯಿತ ವಿಲ್ ನಾಮೆಯ ಕಾರ್ಯರೂಪಕ್ಕೆ ಬಂದ ನಂತರ ನಮ್ಮ ತಾಯಿಯರದಾರ ದಾವಲೆ ಮಾಬೀ ಯವರ ಶಾಂತಿಯುತವಾದ ಸ್ವಾಧೀನಾನುಭವದಲ್ಲಿರುವರು ಸದರಿ ನೋಂದಾಯಿತ ವಿಲ್ ನಾಮೆಯು ದೃಢೀಕೃತ ಪ್ರತಿ ತಮ್ಮ ನ್ಯಾಯಾಲಯ ಪರಿಶೀಲಿಸಬೇಕಾಗಿ ಪ್ರಾರ್ಥನೆ. ಹಾಗೂ ಮರಣ ದೃಢೀಕೃತ ಪ್ರಮಾಣ ಪತ್ರ ಪಹಣಿ ಪತ್ರಿಕೆ, ಇ.ಸಿ. ದೃಢೀಕೃತ ಪ್ರತಿಯನ್ನು ಪರಿಶೀಲಿಸಬೇಕಾಗಿ ಪ್ರಾರ್ಥನೆ.

5) ದಾವ ಆಸ್ತಿಯ ಒಟ್ಟು ವಿಸ್ತೀರ್ಣ 2-89 ಎಕರೆ ಜಮೀನಿನಲ್ಲಿ ದಾವಲೆ ಮಾಬೀ ಯವರು ಶಾಂತಿಯುತವಾದ ಸ್ವಾಧೀನಾನುಭವದಲ್ಲಿರುತ್ತದೆ. ಸದರಿಆಸ್ತಿಯನ್ನು ನಮ್ಮ ತಾಯಿಯವರಾದ ದಾವಲೆ ಮಾಬೀ ಯವರೆ ಸಾಗುಮಾಡಿತ್ತಿರುವರು ಆದರೆ ಪಹಣಿ ಪತ್ರಿಕೆಯಲ್ಲಿ ತಪ್ಪಾಗಿ ನಮೂದಾಗಿರುತ್ತದೆ.

6) ದಾವ ಆಸ್ತಿಯ ಮಾರಾಟಗಾರರಾದ ರಾಧಮ್ಮ ನವರಿಗೆ ಯಾವ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಅಧಿಕಾರ, ಅನುಭವ ಎಂದೂ ಇರುವುದಿಲ್ಲ. ದಾವ ಆಸ್ತಿಯ ಮೇಲೆ ಹಕ್ಕಿನ ಬಗ್ಗೆ ವಿವಾದವು ಇರುವುದರಿಂದ ಮಾನ್ಯ ನ್ಯಾಯಾಲಯಕ್ಕೆ ವಿಲೇವಾರಿ ಮಾಡುವ ಅಧಿಕಾರ ಇರುವುದಿಲ್ಲ.

7) ಸದರಿ ಅರ್ಜಿದಾರರು ಮತ್ತು ಮರಡಿ ರಾಧಮ್ಮ ಇವರು ಕೂಡಿಕೊಂಡು ದಾವ ಆಸ್ತಿಯನ್ನು ಕಬಳಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಸದರಿ ಕ್ರಯ ಪತ್ರವನ್ನು ಸೃಷ್ಠಿಮಾಡಿರುವರು. ಸದರಿ ಕ್ರಯ ಪತ್ರವು ಸೃಷ್ಟಿ ಮಾಡಿರುವ ದಾಖಲೆಯಾಗಿರುತ್ತದೆ. ಮಾನ್ಯ ನ್ಯಾಯಾಲಯದಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಮಾನ್ಯ ಹ.ಬೊ.ಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಮು.ದಾ.ಸಂಖ್ಯೆ 246/15 ರ ಬಗ್ಗೆ ತೀರ್ಮಾನವಾಗುವರೆಗೂ ಯಾವುದೇ ಕ್ರಮ ಕೈಗೊಳ್ಳಬಾರದು ಮತ್ತು ಅರ್ಜಿದಾರಿಗೆ ತಮ್ಮ ಹಕ್ಕಿನ ಬಗ್ಗೆ ತೀರ್ಮಾನ ತೆಗೆದಕೊಳ್ಳಬಾರದೆಂದು ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳಲು ಆದೇಶಿಸುವಂತೆ ಪ್ರಾರ್ಥನೆಯನ್ನು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ:03.05.2016 ರಂದು ಉಭಯರು ಹಾಜರಾಗಿರುತ್ತಾರೆ. ತಕರಾರುದಾರರ ಪರ ವಕೀಲರು ಹೇಳುವಂತೆ; ಸದರಿ ಜಮೀನು ಸ.ನಂ.173ಬಿ ವಿಸ್ತೀರ್ಣ 4-77 ಎಕರೆ ಜಮೀನು ಒ.ಎಸ್.ನಂ.246/2015 ರ ಪ್ರಕಾರ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುವ ಕಾರಣ, ಪ್ರಕರಣವನ್ನು ಆದೇಶಿಸಬಾರದೆಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಅರ್ಜಿದಾರರು ಹೇಳುವಂತೆ; ಕ್ರಯ ಪ್ರಕಾರ ನನ್ನ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ:03.05.2016 ರಂದು ಅರ್ಜಿದಾರರು ಗೈರುಹಾಜರಾಗಿರುತ್ತಾರೆ. ಮತ್ತು ತಕರಾರುದಾರರ ಪರ ವಕೀಲರು ಹಾಜರಾಗಿ ಹೇಳುವಂತೆ;ಪ್ರಕರಣದಲ್ಲಿ ಅರ್ಜಿದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ಸದರಿ ಪ್ರಕರಣವು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿರುವುದರಿಂದ ಹಾಗೂ ಐ.ಎಲ್.ಆರ್ 2002 ಕೆ.ಎ.ಆರ್.2750 ಸದರಿ ಆದೇಶದನ್ವಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸುವಂತೆ ಕೋರಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು/ಪರ ವಕೀಲರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಒ.ಎಸ್.ನಂ.246/2015 ರ ಪ್ರಕಾರ ಮಾನ್ಯ ಸಿವಿಲ್ ನ್ಯಾಯಾಲಯ ಹಗರಿಬೊಮ್ಮನಹಳ್ಳಿಯಲ್ಲಿ ದಾವೆ ಇರುವ ಕಾರಣ, ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.30/2015-16 ರ ಪ್ರಕಾರ, ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಉಭಯ ಪಕ್ಷಕಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:08.09.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

[ವಿ.ಹೆಚ್.ಮಲ್ಲಿಕಾರ್ಜುನ] 8/9/16
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ
ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ ಇವರಿಗೆ.
4. ಶುದ್ಧ ಪ್ರತಿ ಕಡತಕ್ಕೆ.